## ಪುರಾತನ ರಹಸ್ಯ ಕೋಣೆ

ತುಂಗಭದ್ರಾ ನದಿಯ ದಡದಲ್ಲಿರುವ ಹಂಪಿ, ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ಪ್ರಮುಖ ನಗರವಾಗಿತ್ತೆನ್ನುವುದು ಜನಜನಿತ. ಹಂಪಿಯ ಅಂದಿನ ಕಾಲದ ಸ್ಮಾರಕಗಳಲ್ಲಿ, ರಾಜಾಂಗಣದ ಮಹಾನವಮಿ ದಿಬ್ಬದ ನೈರುತ್ಯಕ್ಕಿರುವ ಪುಟ್ಟ ನೆಲಸ್ತರದ ಈ ಕೌತುಕಮಯ ಕಟ್ಟೋಣವು ರಹಸ್ಯ ಕೋಣೆಯೆನಿಸಿದೆ.

ಹಸಿರು ಬಳಪದ ಕಲ್ಲಿನಿಂದ ನಿರ್ಮಿಸಲಾದ ಆಯತಾಕಾರದ ನೆಲಮಾಳಿಗೆಯನ್ನು ವಾಯವ್ಯ ದಿಕ್ಕಿನಲ್ಲಿರುವ ಮೆಟ್ಟಿಲುಗಳ ಸಹಾಯದಿಂದ ಪ್ರವೇಶಿಸಬಹುದಾಗಿದೆ. ಒಳಕೋಣೆಯನ್ನು ಸುರಂಗ ರೀತಿಯ ಅಗಲ ಕಿರಿದಾದ ಕತ್ತಲ ವರಾಂಡದ ಮೂಲಕ ಎರಡು ದ್ವಾರಗಳಿಂದ ತಲುಪಬಹುದು (ಇವುಗಳಲ್ಲೊಂದು ದ್ವಾರ ತುರ್ತು ನಿರ್ಗಮನಕ್ಕೆ ಮೀಸಲಿಟ್ಟಿರಬಹುದು). ಕೋಣೆಯಲ್ಲಿ ನಾಲ್ಕು ಸ್ವತಂತ್ರ ಸ್ತಂಭಗಳೂ, ಮೂಲೆಗಂಬಗಳೂ ಅಸ್ತಿತ್ವದಲ್ಲಿವೆ.

ಮೇಲ್ಚಾವಣಿಯಲ್ಲಿ ನೀರಿನ ತೊಟ್ಟಿಯಂತಹ ರಚನೆಯಿತ್ತೆಂದೂ, ಅದರ ಕೆಳಗಿನ ಈ ಕೊಠಡಿಯಲ್ಲಿ ರಾಜ ತನ್ನ ಮಂತ್ರಿ, ಸೇನಾಧಿಪತಿಗಳ ಜೊತೆ ಗುಪ್ತ ಸಮಾಲೋಚನೆ ನಡೆಸುತ್ತಿದ್ದರು ಎನ್ನಲಾಗಿದೆ. ಸಮಾಲೋಚನೆಯ ಸದ್ದು ಹೊರಗೆ ಕೇಳಿಸದ ರೀತಿಯಲ್ಲಿ ಸೌಂಡ್ ಪ್ರೂಫ್ ಕೂಡ ಆಗಿನ ಕಾಲದಲ್ಲೇ ಅಳವಡಿಸಿಕೊಂಡಿದ್ದರು ಎಂಬುದು ಅಲ್ಲಿನ ಗೈಡ್ ಮಾತು.

ಸ್ಥಳೀಯ ಮಾಹಿತಿ ಫಲಕದನುಸಾರ, ಪರ್ಷಿಯಾದ ರಾಯಭಾರಿ ಅಬ್ದುರ್ ರಜಾಕ್ ಇದನ್ನು ಅರಮನೆಯೊಳಗಿನ ಭೂಗತ ಖಜಾನೆ ಎಂದು ದಾಖಲಿಸಿದ್ದಾರೆ. ಇದರ ಕಿರಿದಾದ ಕಾವಲು ದ್ವಾರ ಮತ್ತು ದಪ್ಪವಾದ ಗಚ್ಚಿನ ಛಾವಣಿಯು ಈ ಮಾತನ್ನು ಪುಷ್ಟೀಕರಿಸುತ್ತದೆ.

ಅದೇನಿದ್ದರೂ, ಪುರಾತನ ಕಾಲದಿಂದಲೂ ನಮ್ಮ ನಾಡಿನಲ್ಲಿ ರಾಜತಾಂತ್ರಿಕತೆ, ವಿಜ್ಞಾನ ಮತ್ತು ವಾಸ್ತುಶಾಸ್ತ್ರ ಅದೆಷ್ಟು ಬಲಾಢ್ಯವಾಗಿತ್ತೆನ್ನುವುದಕ್ಕೆ ಇಂತಹ ಸ್ಮಾರಕಗಳು ಸಾಕ್ಷಿ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ





## ಜೋಕುಮಾರ ಸ್ವಾಮಿ

ಜೋಕುಮಾರ ಸ್ವಾಮಿ ಆರಾಧನೆಯು ಉತ್ತರ ಕರ್ನಾಟಕದ ವಿಶಿಷ್ಟ ಸಂಪ್ರದಾಯ. ಅಷ್ಟಮಿಯ ದಿನ ಜೋಕುಮಾರ ಸ್ವಾಮಿ ಹುಟ್ಟುತ್ತಾನೆ ಎಂಬುದು ಪುರಾತನ ಕಾಲದಿಂದ ಇರುವ ನಂಬಿಕೆ. ಅಗಲವಾದ ಮುಖ, ದೊಡ್ಡದಾದ ಕಣ್ಣುಗಳು, ಕೈಯಲ್ಲಿ ಕತ್ತಿ, ಕೋರೆ ಮೀಸೆಯ ರೂಪದಲ್ಲಿ ಜೋಕುಮಾರ ಸ್ವಾಮಿ ಇಲ್ಲಿ ಕಾಣಿಸಿಕೊಂಡಿದ್ದಾನೆ. ಆಚರಣೆ ವೇಳೆ ಮೂರ್ತಿಯ ಹಿಂದೆ ಬೇವಿನತಪ್ಪಲು ಇಡುವುದು ಹಾಗೂ ತುಟಿಗೆ ಬೆಣ್ಣೆಹಚ್ಚುವುದು ವಾಡಿಕೆ.

‘ಜೋಕುಮಾರ ಬಂದ ಜೋಕುಮಾರ ಎನಕುವರಾ... ಹಳ್ಳಕೊಳ್ಳ ತಿರುಗಾಡಿಕೊಂಡು ಬಂದಾನ ಜೋಕುಮಾರ’ ಎಂದು ಹಾಡುತ್ತಾ ಜೋಕುಮಾರ ಸ್ವಾಮಿ ಇರುವ ಬುಟ್ಟಿಯನ್ನು ಹೊತ್ತ ಅಂಬಿಗ ಸಮಾಜದ ಹೆಣ್ಣು ಮಕ್ಕಳು ಮನೆಮನೆ ಸಂಚರಿಸಿ ದವಸಧಾನ್ಯ ಪಡೆದು ಜೋಳದ ನುಚ್ಚನ್ನು ಪ್ರಸಾದವಾಗಿ ನೀಡುತ್ತಾರೆ. ಉತ್ತಮ ಮಳೆಬೆಳೆ ಹಾಗೂ ಸಮೃದ್ಧಿಯನ್ನು ನಾಡಿನ ರೈತರಿಗೆ ತರುವ ದೇವರಾಗಿ ಜೋಕುಮಾರ ಸ್ವಾಮಿ ಇಲ್ಲಿ ರೂಪುಗೊಂಡಿದ್ದಾನೆ.

–ಮಹಾಂತೇಶ ಬಾಗೇವಾಡಿ, ಬಾದಾಮಿ

## ಸುಗಂಧಭರಿತ ಹವ್ಯಾಸ

ಚಿತ್ರದಲ್ಲಿ ಕಾಣುತ್ತಿರುವುದು ಯಾವುದೋ ಅಂಗಡಿಯ ಶೋಕೇಸ್ ಅಲ್ಲ. ಇದು ಮನೆಯೊಂದರಲ್ಲಿ ವ್ಯವಸ್ಥಿತವಾಗಿ ಸುಗಂಧ ದ್ರವ್ಯಗಳನ್ನು ಇಟ್ಟಿರುವ ಶೋಕೇಸ್. ಶುಭ್ರ ಬಟ್ಟೆ ತೊಟ್ಟ ನಂತರ ಸುಗಂಧ ದ್ರವ್ಯ ಪೂಸಿಕೊಳ್ಳುವುದು ಅನೇಕರ ಪರಿಪಾಟ. ಅಂತೆಯೇ ರಾಯಚೂರಿನ ಎಲ್.ಬಿ.ಎಸ್. ನಗರದ ಕಂಪ್ಯೂಟರ್ ವ್ಯಾಪಾರಿ ಚಂದಾ ಹುಸೇನ್ ಅವರು ಸುಗಂಧ ದ್ರವ್ಯ ಹಚ್ಚಿಕೊಳ್ಳುವುದಷ್ಟೇ ಅಲ್ಲದೆ ಅವುಗಳನ್ನು ಸಂಗ್ರಹಿಸುವ ಆಸಕ್ತಿ ಬೆಳೆಸಿಕೊಂಡಿದ್ದಾರೆ. ಕಳೆದ ಹತ್ತು ವರ್ಷಗಳಿಂದ ದುಬೈ, ದೆಹಲಿ, ಬಾಂಬೆ, ಹೈದರಾಬಾದ್, ಅಜ್ಮೀರ್, ಮುಂತಾದ ಕಡೆಗಳಿಂದ ಸುಗಂಧ ದ್ರವ್ಯಗಳನ್ನು ಖರೀದಿಸಿ ಸಂಗ್ರಹಿಸಿದ್ದಾರೆ.

ವ್ಯವಹಾರದ ಮೇಲೆ ಹೋದಾಗ ಅಲ್ಲಿನ ವಿಶೇಷ ಸೆಂಟ್‌ಗಳನ್ನು ಪರಿಶೀಲಿಸುವ ಇವರು, ಅದು ಇಷ್ಟವಾದರೆ ಮಾತ್ರ ಖರೀದಿಸುತ್ತಾರೆ. ಹುಸೇನ್ ಅವರ ಬಳಿ ಸುಗಂಧ ದ್ರವ್ಯಗಳ ವಿವಿಧ ಫ್ಲೇವರ್‌ಗಳ ಭಂಡಾರವೇ ಇದೆ. ವೈಟ್ ಉದ್, ಗಂಧ, ಮಸ್ಕ್, ಗುಲಾಬಿ, ಬ್ಲಾಕ್ ಉದ್, ಐಸ್, ಬ್ಲೂ ಪಾಯಿಸನ್ ಹೀಗೆ ಇಪ್ಪತ್ತಕ್ಕೂ ಅಧಿಕ ವಿವಿಧ ಸುವಾಸನೆಯ ನೂರಕ್ಕೂ ಅಧಿಕ ಬಾಟಲಿಗಳು ಇವರ ಬಳಿಯಿದ್ದು, ಬಾಟಲಿಗಳಂತೂ ಮನಮೋಹಕವಾಗಿವೆ.

–ಈರಣ್ಣ ಬೆಂಗಾಲಿ, ರಾಯಚೂರು

